ಶ್ರೀ ಎಂ. ಮಲ್ಲಿಕಾರ್ಜುನಖರ್ಗೆ.—ಈ ರೀತಿಯ ರೂಲ್ಸ್ ರೆಗ್ಯುಲೇಶನ್ಸ್ ಇಷ್ಯೂ ಮಾಡಿದ ನಂತರ, ಇನ್ನೊಂದನ್ನು ಮಾಡಿಫೈ ಮಾಡಿ, ಮ್ಯಾನೇಜ್‌ಮೆಂಟ್ ಕೋಟಾದಲ್ಲಿ ಕೊಟ್ಟಿದ್ದಾರೆ ಎಂದು ಅವರು ಹೇಳುತ್ತಿದ್ದಾರೆ ಈ ರೂಲ್ಸ್ ಇರುವಾಗ ಈ ರೀತಿಯಲ್ಲಿ ಅದನ್ನು ವೈಲೇಟ್ ಮಾಡುವ ಅವಶ್ಯಕತೆ ಏನು ಬಂತು ?

ಶ್ರೀ ಬಿ. ರಾಚಯ್ಯ.—ಅದರ ವಿವರಗಳನ್ನು ನಾನು ತರಿಸಿಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ರೂಲ್ಸ್‌ನ್ನು ವಯಲೇಟ್ ಮಾಡಿದ್ದರೂ, ಈ ರೂಲ್ಸ್‌ನ್ನು ಕೋಟ್ ಮಾಡಬಾರದಾಗಿತ್ತು.

ಶ್ರೀ ಬಿ. ರಾಚಯ್ಯ.—ಹಾಗೆ ಮಾಡಿರುವುದು ಮ್ಯಾನೇಜ್‌ಮೆಂಟ್ ಸೀಟ್‌ನಲ್ಲಿಯೋ, ಗವರ್ನ್‌ಮೆಂಟ್ ಸೀಟ್‌ನಲ್ಲಿಯೋ ಎಂದು ನೋಡಿ ಹೇಳಬೇಕಾಗುತ್ತದೆ. ಅದನ್ನು ನೋಡಿ ಹೇಳುತ್ತೇನೆ.

ಉಪಾಧ್ಯಕ್ಷರು....ಮಾನ್ಯ ವೀರಪ್ಪ ಮೊಯಿಲಿಯವರು ತಮ್ಮ ಗಮನ ಸೆಳೆಯುವ ಸೂಚನೆಯನ್ನು ಮಂಡಿಸಬೇಕು.

ಶ್ರೀ ಎನ್. ಎಸ್. ಖೇಡ್.—ಅಧ್ಯಕ್ಷರೇ. ನನಗೆ ಸರಿಯಾದ ಉತ್ತರ ಸಿಕ್ಕಲ್ಲಿಲ್ಲ.

ಉಪಾಧ್ಯಕ್ಷರು.—ತಾವು ಸಚಿವರಿಗೆ ವಿಷಯವನ್ನು ಕುಳುಹಿಸಿಕೊಡಿ. ತಾವು ಹೇಳುವ ವಿಚಾರ ಅವರ ಗಮನಕ್ಕೆ ಬಂದಿಲ್ಲ ಎಂದು ಕಾಣುತ್ತದೆ. ಗೊತ್ತಿಲ್ಲದ ವಿಚಾರದಲ್ಲಿ ಹೇಗೆ ಉತ್ತರವನ್ನು ಕೊಡುತ್ತಾರೆ ?

ಶ್ರೀ ಎನ್. ಎಸ್. ಖೇಡ್.—ನಾನು ಅವರಿಗೆ ಪತ್ರ ಬರೆದಿದ್ದೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರು ಕೇಳಿರತಕ್ಕಂಥಾದ್ದು ಏನೆಂದರೆ, ಖಾಸಗಿ ಕಾಲೇಜಿನಲ್ಲಿ ರತಕ್ಕಂಥ ಖಾಸಗಿ ಸೀಟಿನ ವಿದ್ಯಾರ್ಥಿಗಳು ಯಾರಿದ್ದಾರೆ, ಅವರಿಗೂ ಕೂಡ ಇಂತಹ ಬೇಡಿಕೆ ಬಂದರೆ, ಅವಕಾಶವನ್ನು ಮಾಡಿಕೊಡಿ ಎಂಬುದಾಗಿದೆ. ಆ ಬಗ್ಗೆ ಸಂಬಂಧಪಟ್ಟವರೊಂದಿಗೆ ಈ ಕುರಿತು ವಿಂಟಿಂಗ್ ಮಾಡಿದ್ದಾಗ, ಹೀಗೆ ಏಕೆ ಮಾಡಬಾರದು ಎಂದು ಕೇಳಿದಾಗ ಇಲ್ಲಿ ಬಹಳ ಹೆಚ್ಚು ಸಂಖ್ಯೆಯಲ್ಲಿ ಖಾಸಗಿ ಕಾಲೇಜುಗಳು ಇವೆ, ಈ ರೀತಿಯಾಗಿ ಪರ್ಗಾವಣೆ ಮಾಡಿದರೆ ಕಷ್ಟವಾಗುತ್ತದೆ, ಮತ್ತು ಅದರಿಂದ ಉಂಟಾಗುವ ಇತರ ಸಮಸ್ಯೆಗಳ ಕುರಿತಂ ಅವರು ತಿಳುವಳಿಕೆ ಕೊಟ್ಟಿದಂದರಿಂದ ಮುಖ್ಯ ಮಂತ್ರಿಗಳ ಮಟ್ಟದಲ್ಲಿ ಈ ಒಂದು ತೀರ್ಮಾನ ಆಗಿರುತ್ತದೆ.

ಉಪಾಧ್ಯಕ್ಷರು.—ಮಾನ್ಯ ವೀರಪ ಮೊಯಿಲಿಯವರು ತಮ್ಮ ಗಮನಸೆಳೆಯುವ ಸೂಚನೆಯನ್ನು ಮಂಡಿಸುವುದು.

ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳನ್ನು ವಜಾ ಮಾಡಿ ಆಡಳಿತಾಧಿಕಾರಿಯನ್ನು ನೇಮಕ ಮಾಡಿರುವುದು

ಶ್ರೀ ಎಂ. ವೀರಪ್ಪಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ಸರಕಾರಿ ನೌಕರರ ಸಂಘದ ಪದಾಧಿಕಾರಿಗಳನ್ನು ವಜಾ ಮಾಡಿ, ಆಡಳಿತಾಧಿಕಾರಿಯನ್ನು ನೇಮಕ ಮಾಡಿರುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಂಖ್ಯ ಮುಂತ್ರಿಗಳ ಪರವಾಗಿ ನಾನು ಈ ಹೇಳಿಕೆಯನ್ನು ಓದುತ್ತೇನೆ ಇದು ನನ್ನ ಇಲಾಖೆಗೆ ಸಂಬಂಧಪಟ್ಟದ್ದು ಆಗಿದೆ. ಇದು ಇಂಗ್ಲೀಷ್‌ನಲ್ಲಿ ಇರುವುದರಿಂದ ಕ್ಷಮೆ ಕೋರಿ ಅದನ್ನು ಓದುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ.—ಇದರ ಪ್ರತಿ ಕನ್ನಡದಲ್ಲಿ ಇಲ್ಲವೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಕನ್ನಡದಲ್ಲಿ ಇಲ್ಲ, ಅದಕ್ಕಾಗಿ ಕ್ಷಮೆ ಕೇಳಿಕೊಂಡಿದ್ದೇನೆ.

MR. SPEAKER.—The District Registrar Bangalore District brought to Government notice that the Karnataka State Government Employees Association has failed to submit the annual return as

required by Sec. 13 of the Karnataka Society Registration Act 1960 and has also not conveyed the General Body Meeting since 1985. Therefore and also since several complients regarding the working and financial condition of the Association had been received, he had recommended that an Administrator be appointed under Sec. 27-A of the said Act. Government after considering the report of the District Registrar appointed the Deputy Commissioner, Bangalore Rural District, as Administrator to the said Association vide G. O. No. RD 193 EST 80 dated 11-3-1988. The Administrater has accordingly taken charge.

In W. P. No. 4493/88 filed by the Karnataka State, Government Employees Association represented by its General Secretary and another namely Sri K. A. Keshava Murthy before the Hon'ble High Court, the above Government Order has been challenged and the matter ispending before the Hon'ble High Court. Hence the matter is subjudice.

ಉಪಾಧ್ಯಕ್ಷರು.—ಸಬ್ ಜ್ಯೂಡಿಸ್ ಆಗುತ್ತದೆಂದು ಹೇಳಿದ್ದಾರೆ.

ಶ್ರೀ ಎಂ ವೀರಪ್ಪ ಮೊಯಿಲಿ.—ಆಡಳಿತಾಧಿಕಾರಿಯನ್ನು ನೇಮಕ ಮಾಡಿದ್ದೂ ಕೂಡ ಸಬ್ ಜ್ಯುಡಿಸ್ ಇನ್ನೊಂದು ಸಬ್‌ಜ್ಯುಡಿಸ್ ಆಗಿದೆ. ಇದು ಸರಕಾರಕ್ಕೆ ಅನ್ವಯವಾಗುವುದಿಲ್ಲ ನಮಗೆ ಹೇಗೆ ಅನ್ವಯವಾಗುತ್ತದೆ ? ೧೯೨೦ರಿಂದ ಗವರ್ನ್‌ಮೆಂಟ್ ಎಂಪ್ಲಾಯೀಸ್ ಅಸೋಸಿಯೇಷನ್ ಇದೆ, ೬೮ ವರ್ಷದಿಂದ ಇದ್ದಂತಹ ಈ ಸಂಸ್ಥೆಯ ಪದಾಧಿಕಾರಿಗಳನ್ನು ವಜಾ ಮಾಡಿ ಆಡಳಿತಾಧಿಕಾರಿಯನ್ನು ನೇಮಕ ಮಾಡಿದ್ದೀರಿ. ೧೯೮೭ರಲ್ಲಿ ಸರಕಾರಿ ನೌಕರರ ಸಂಬಳದ ಶೇಕಡ ೧೦ರಷ್ಟು ಹಣವನ್ನು ಸಣ್ಣ ಉಳಿತಾಯದಲ್ಲಿ ತೊಡಗಿಸಿದಲ್ಲಿ ನೂರು ಕೋಟಿ ರೂಪಾಯಿ ಬರುತ್ತದೆ, ಇವರು ಅದಕ್ಕೆ ಒಪ್ಪಲಿಲ್ಲ ಎನ್ನುವ ಕಾರಣದಿಂದ ಇದನ್ನು ಮಾಡಿರ ಬಹುದೆಂದು ನನ್ನ ಭಾವನೆ. ೫೦ ಪರ್ಸೆಂಟ್‌ನಷ್ಟು ಹಣವನ್ನು ಕೆ ಜಿ.ಐ.ಡಿ. ಮುಖಾಂತರ ವಸೂಲು ಮಾಡಿಕೊಂಡಿರಿ ಯಾವುದಾದರೂ ಅರಿಯರ್ಸ್ ಡಿ.ಎ, ಹಣ ಬಂದರೆ ಯೂನಿಲ್ಯಾಟರಲ್ ಆಗಿ ಅದನ್ನು ಇಂಪೌಂಡ್ ಮಾಡುತ್ತಿದ್ದೀರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದನ್ನು ಸೂಪರ್‌ಸೀಡ್ ಮಾಡಲಿಕ್ಕೆ ಇದ್ದಂತಹ ಕಾರಣಗಳೇ ಬೇರೆ ಆ ಕಾರಣಗಳನ್ನು ಪ್ರಶ್ನೆ ಮಾಡಿ ಹೈಕೋರ್ಟಿನಲ್ಲಿ ರಿಟ್ ಪಿಟಿಷನ್ ಹಾಕಿದ್ದಾರೆ ಅದು ಪೆಂಡಿಂಗ್ ಇದೆ ಅದರ ಬಗ್ಗೆ ಚರ್ಚೆ ಮಾಡಲಿಕ್ಕೆ ಬರುವುದಿಲ್ಲ,

ಶ್ರೀ ಎಂ. ವೀರಪ್ಪ ಮೊಯಿಲಿ.—ಆ ಕಾರಣ ಅಲ್ಲವೇ ಅಲ್ಲವೆಂದು ನಾನು ಹೇಳಿದ್ದುದು ಆ ಕಾರಣವನ್ನು ನಾನು ಪ್ರಶ್ನೆ ಮಾಡಲಿಲ್ಲ. ರಿಟ್ ಪಿಟಿಷನ್ ನಂ. ೧೨೨೩೩-೩೩, ಅಲ್ಲಿರಲ್ಲಿ ಏನು ಅದರ ಬಗ್ಗೆ ರಿಜಿಸ್ಟ್ರಾರ್‌ರಿಂದ ನೋಟೀಸ್ ಕೊಟ್ಟಿದ್ದೀರಿ, ಅದು ಸ್ಟೇ ಆಗಿದೆ. ಆ ಎನ್‌ಕ್ವೈರಿ ಸ್ಟೇ ಈಗಲೂ ಕೂಡ ಜಾರಿಯಲ್ಲಿದೆ ಇದನ್ನು ವೆಕೇಟ್ ಮಾಡಿಲ್ಲ ವೆಕೇಟ್ ಮಾಡಲಿಕ್ಕೆ ಏನೇ ಅರ್ಜಿ ಹಾಕಿದ್ದೀರಿ ಅದನ್ನು ಹೈಕೋರ್ಟ್ ವಜಾ ಮಾಡಿದೆ, The notice of the Registrar has been stayed. The state is still in force. It has been confirmed. ಎನ್‌ಕ್ವೈರಿ ಬಗ್ಗೆ ಸ್ಟೇ ಯಾದ ಮೇಲೂ ಕೂಡ ಕಾನೂನನ್ನು ತಮ್ಮ ಕೈಯ್ಯಲ್ಲಿ ತೆಗೆದುಕೊಂಡು ಒಂದು ರೀತಿಯ ನಿರಂಕುಶ ಪ್ರಭಾವದಿಂದ ಆಡಳಿತಾಧಿಕಾರಿಯನ್ನು ನೇಮಿಸುವುದಕ್ಕೆ ಏನು ಕಾರಣ ? ಅದಕ್ಕೆ ಕಾರಣ ಇದು ಇರಬಹುದು. ಸರಕಾರೀ ನೌಕರರು ತಮ್ಮ ಸಂಬಳದಲ್ಲಿ ಶೇಕಡ ಹತ್ತರಷ್ಟು ಹಣವನ್ನು ಪ್ರತಿ ತಿಂಗಳೂ ಸಣ್ಣ ಉಳಿತಾಯದಲ್ಲಿ ಇನ್‌ವೆಸ್ಟ್ ಮಾಡಬೇಕೆಂದು ಫೆಬ್ರುವರಿ ೮ರಲ್ಲಿ ಪದಾಧಿಕಾರಿಗಳನ್ನು ಮಾನ್ಯ ಮುಖ್ಯ ಮಂತ್ರಿಗಳು ಮೀಟಿಂಗ್ ಕರೆದರು, ಮುಖ್ಯ ಕಾರ್ಯದರ್ಶಿಯವರೂ ಕೂಡ ಸಂಘದ ಪದಾಧಿಕಾರಿಗಳನ್ನು ಮೀಟಿಂಗ್ ಕರೆದು ಇದರ ಬಗ್ಗೆ ಅಲ್ಲಿ ಚರ್ಚೆ ಮಾಡಿದರು, ಸರಕಾರೀ ನೌಕರರು ಈಗಲೇ ಕಷ್ಟದಲ್ಲಿ ಜೀವನ ಮಾಡುತ್ತಿದ್ದಾರೆ ಅಂಥಾದ್ದರಲ್ಲಿ ಹತ್ತು ಪರ್ಸೆಂಟ್

ಹಣವನ್ನು ಪ್ರತಿ ತಿಂಗಳೂ ಉಳಿತಾಯದಲ್ಲಿ ತೊಡಗಿಸಿದರೆ ತೊಂದರೆಯಾಗುತ್ತದೆ ತೊಡಗಿಸಲಿಕ್ಕಾಗುವುದಿಲ್ಲವೆಂದು ಪದಾಧಿಕಾರಿಗಳು ಹೇಳಿದ ಮೇಲೆ ಆಡಳಿತಾಧಿಕಾರಿಯನ್ನು ನೇಮಕ ಮಾಡಿದಿರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕಾಲ್ಪನಿಕವಾದಂತಹ ಕಾರಣಗಳನ್ನು ಊಹಿಸಿ ಹೇಳಿತ್ತಿದ್ದಾರೆ. ಮೂರು ವರ್ಷದಿಂದ ವಾರ್ಷಿಕ ಸಭೆಯನ್ನು ಕರೆಯಲಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ನನಗೆ ಹೇಳಲಿಕ್ಕೇ ಬಿಡುವುದಿಲ್ಲ. ಸಬ್‌ಜ್ಯುಡಿಸ್ ಎಂದು ಹೇಳುತ್ತೀರಿ.

SRI S. R. BOMMAI.—It is in the reply. I am not stating anything outside the reply. In the reply I have said that General Body Meeting since 1985 were not called. ನಾನು ಇದರಲ್ಲಿ ಹೇಳಿದ್ದೇನೆ, ಹೊಸದಾಗಿ ಏನೂ ಹೇಳುತ್ತಿಲ್ಲ. ಅಲ್ಲಿ ಮೂರು ವರ್ಷದಿಂದಲೂ ಜನರಲ್ ಬಾಡಿ ಮೀಟಿಂಗ್‌ನ್ನು ಕರೆದಿರಲಿಲ್ಲ. ಮತ್ತೆ ಅಲ್ಲಿ ಮೀಟಿಂಗ್ ಕರೆಯದಿದ್ದರೆ ಸೂಪರ್‌ಸೀಡ್ ಮಾಡತಕ್ಕಂಥ ಸರ್ಕಾರದ ಕರ್ತವ್ಯವಾಗಿರುತ್ತದೆ. ಜನರಲ್ ಬಾಡಿ ಮೀಟಿಂಗ್‌ನ್ನು ಪ್ರತಿ ವರ್ಷ ಕರೆಯಬೇಕು. ನಾವು ಹೇಳತಕ್ಕಂಥದ್ದು ಕಾಲ್ಪನಿಕ ಕಾರಣಗಳೇನೂ ಇಲ್ಲ, ಸರ್ಕಾರಿ ನೌಕರರ ಬಗ್ಗೆ ಈ ಸರ್ಕಾರ ಬಹಳ ಸಹಾನುಭೂತಿಯಿಂದ ಇದೆ, ಒಂದೂ ವರ್ಷದಲ್ಲಿ ಪೇ ರಿವಿಷನ್ ಬಂದಾಗ ೧೮೦ ಕೋಟಿ ರೂಪಾಯಿ ಕೊಟ್ಟಿದ್ದೇವೆ. ಒಂದೇ ವರ್ಷದಲ್ಲಿ ಈ ಬೊಕ್ಕಸಕ್ಕೆ ಅಷ್ಟು ಖರ್ಚು ಬರುತ್ತದೆ. We have accepted the Pay Commission's report. ಬೇರೆ ರಾಜ್ಯದಲ್ಲಿ ಎಲ್ಲಿಯೂ ಮಾಡಲಿಲ್ಲ ಆಂಧ್ರದಲ್ಲಿ ಚಳುವಳಿಯಾಗಿದೆ. ಹತ್ತು ಪರ್‌ಸೆಂಟನ್ನು ಪಾಲೆಂಟರಿ ಆಗಿ ಕೊಡಬೇಕು ಎಂದು ಕೇಳಿದ್ದೆವು. ಅವರು ಒಪ್ಪಲಿಲ್ಲ ಎಂದು ಹೇಳಿದ್ದಾರೆ. ಅದನ್ನು ಬಿಟ್ಟುಬಿಟ್ಟೆವು. ಒಂದೇ ಕಾರಣ ಅಲ್ಲಿ ಜನರಲ್ ಬಾಡಿ ಮೀಟಿಂಗ್ ಕರೆದಿರಲಿಲ್ಲ ಎಂದು. ನೀವು ಹೇಳತಕ್ಕಂಥದ್ದಕ್ಕೆ ಮತ್ತು ಈ ಹತ್ತು ಪರ್‌ಸೆಂಟ್ ವಸೂಲು ಮಾಡತಕ್ಕಂಥದ್ದರ ಬಗ್ಗೆ ಅದಕ್ಕೂ ಇದಕ್ಕೂ ಸಂಬಂಧ ಇಲ್ಲ. ಅದಕ್ಕಾಗಿ ಸೂಪರ್‌ಸೀಡ್ ಮಾಡಿದ್ದೇವೆ. ಎಂದೂ ಹೇಳುವುದೂ ಸರಿಯಲ್ಲ. ಅದನ್ನು ಇಲ್ಲಿ ಕೊಟ್ಟಿರತಕ್ಕಂಥ ರಿಪ್ಲೈಯಲ್ಲಿ ನಮೂದು ಮಾಡಿದ್ದೇವೆ. ಅದು ಸಬ್ ಜ್ಯೂಡೀಸ್ ಇರುವುದರಿಂದ ಹೆಚ್ಚು ವಿವರಗಳಿಗೆ ನಾನು ಹೋಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೧೯೮೫ರಿಂದ ಆಕೌಂಟ್ ಕೊಟ್ಟಿಲ್ಲ ಎಂದು ಹೇಳಿ ಗೌರ್ನಮೆಂಟ್ ಡಿ-ರೆಕ್ಗೈಸ್ ಮಾಡಿ ಅವರಿಗೆ ರೆಕ್ಗೈಸ್ ಮಾಡಬಾರದು ಎಂದು ಹೇಳಿ ೧೯೮೫ ರಿಂದ ಇಲ್ಲಿಯವರೆಗೆ ಎಷ್ಟು ಮೀಟಿಂಗ್‌ನಲ್ಲಿ ಅವರನ್ನು ಕರೆಯಿಸಿದ್ದೀರಿ. ಈ ಆಫೀಸ್ ಬೇರರ್ಸ್‌ನ್ನು ೮೮ ರವರೆಗೆ ಮೂರು ವರ್ಷದಲ್ಲಿ ಹತ್ತಾರು ಸಲ ಮೀಟಿಂಗ್‌ಗೆ ಕರೆಯಿಸಿರಬೇಕು ಅಂದರೆ ಮೊಯಿಲಿಯವರಂ ಹೇಳುವ ಹಾಗೆ ಇದು ಕಾಲ್ಪನಿಕ ಇರಬೇಕು. ಆದರೆ ಈಗ ಪವಾತ್ರ ಸೂಪರ್‌ಸೀಡ್ ಮಾಡತಕ್ಕಂಥದ್ದು ಏತಕ್ಕೆ ಬಂತು ? You have recognised under Societies Registration Act. ನೀವು ಹತ್ತು ಪರ್‌ಸೆಂಟ್ ಕೊಡಬೇಕು ಎಂದು ಕೇಳಿದಾಗ ಅವರು ನಮಗೆ ತೊಂದರೆಯಾಗುತ್ತದೆ ಎಂದು ನಿರಾಕರಿಸಿದಾಗ ನೀವು ಎಕ್ಸ್‌ಟ್ರೀಮ್ ಸ್ಟೆಪ್‌ಗೆ ಹೋಗಿ ಈ ಸೊಸೈಟಿಯನ್ನು ಸೂಪರ್‌ಸೀಡ್ ಮಾಡಿದ್ದೀರಿ. ತಪಂಗೆ ಗೊತ್ತಿರುವಂತೆ ಸೊಸೈಟೀಸ್ ರಿಜಿಸ್ಟ್ರೇಷನ್ ಆಕ್ಟ್‌ನಲ್ಲಿ ಸಾವಿರಾರು ಕ್ಲಬ್‌ಗಳು, ಅಸೋಸಿಯೇಷನ್‌ಗಳು ಇವೆ. ಎಷ್ಟೋ ಸೊಸೈಟಿಗಳು ೧೫-೨೦-೩೦ ವರ್ಷಗಳಿಂದ ಆಕೌಂಟ್‌ನ್ನೇ ಇವತ್ತಿನವರೆಗೂ ಕೊಡದೇ ಇರತಕ್ಕಂಥದ್ದು ಇದೆ. ನೀವು ಕಂಪಲ್‌ಸರಿ ಸೇವಿಂಗ್ಸ್‌ನಲ್ಲಿ ಹತ್ತು ಪರ್‌ಸೆಂಟ್ ಸ್ಯಾಲರಿಯನ್ನು ಸೇವ್ ಮಾಡಬೇಕು, ಉಳಿತಾಯ ಮಾಡಬೇಕು ಎನ್ನುವ ಒಂದು ಪ್ರಪೋಸಲ್‌ನ್ನು ಅವರು ಒಪ್ಪದೇ ಇರುವ ಕಾರಣ ನೀವು ಇದನ್ನು ಮಾಡಿದ್ದೀರಿ ಎಂದು ಸ್ಪಷ್ಟವಾಗಿ ಕೇಳಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗಾಗಲೇ ನಾನು ಹೇಳಿದ್ದೇನೆ ಅವರು ಕಾನೂನಿಗೆ ಒಳಪಡದೇ ಇದ್ದುದರಿಂದ ಈ ರೀತಿ ಮಾಡಿದ್ದೇವೆ. ಅಲ್ಲಿ ಮತ್ತೆ ಡಿ-ರೆಕ್ಗೈಸ್ ಮಾಡುವುದಕ್ಕೆ ಬರುವುದಿಲ್ಲ. ಅದಕ್ಕಾಗಿಯೇ ಅಲ್ಲಿ ಅಡ್ಮಿನಿಸ್ಟ್ರೇಟರನ್ನು ಹಾಕಿದ್ದೇವೆ. ಒಂದು ಭರವಸೆಯನ್ನು ಈ ಸಂದರ್ಭದಲ್ಲಿ ಕೊಡುವುದಕ್ಕೆ ಇಷ್ಟಪಡುತ್ತೇನೆ. ಅಲ್ಲಿ ಆದಷ್ಟು ಬೇಗ ಚುನಾವಣೆ ಮಾಡುತ್ತೇವೆ. ಅಲ್ಲಿ ಎರಡು ಗುಂಪುಗಳು ಆಗಿವೆ. ಆ ಗುಂಪುಗಳಲ್ಲಿ ರಾಜಕೀಯ ಇದೆ. ಆದರೂ ಅಲ್ಲಿ ಕಾನೂನು ಬದ್ಧವಾಗಿ ಚುನಾವಣೆಯನ್ನು ಮಾಡುತ್ತೇವೆ ಎನ್ನತಕ್ಕಂಥ ಭರವಸೆಯನ್ನು ಕೊಡುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.—ತಮ್ಮ ಗಮನಕ್ಕೆ ಈ ವಿಚಾರ ಬಂದಿದೆ. ಈಗ ಗೌರ್ನ್‌ಮೆಂಟ್ ಎಂಪ್ಲಾಯೀಸ್ ಅಸೋಸಿಯೇಷನ್‌ನವರು ಬೈ-ಲಾ ಅವರು ಅಮೆಂಡ್‌ಮೆಂಟ್ ಮಾಡಬೇಕು. ಅದರ ಮೂಲಕವಾಗಿ ಅಲ್ಲಿ ಚುನಾವಣೆಯನ್ನು ಮಾಡಬೇಕು. ಅಲ್ಲಿ ಡಿಸ್ಪಿಡೆಂಟ್ ಗ್ರೂಪ್ ತಮ್ಮ ಸರ್ಕಾರದ ಸ್ಪಾನ್ಸರ್ಡ್ ಗ್ರೂಪ್ ಶ್ರೀಪತಿ, ಶ್ರೀಚನ್ನಬಸವಯ್ಯ ಎಂ.ಎಲ್.ಸಿ. ರಿಟ್ ಪಿಟಿಷನನ್ನು ಹೈಕೋರ್ಟ್‌ನಲ್ಲಿ ಮಾಡಿರುವುದು ತಮ್ಮ ಗಮನಕ್ಕೆ ಬಂತು. ತಾವು ಸೂಪರ್‌ಸೀಡ್ ಮಾಡಿದ್ದಾದು ೨೮-೨-೧೯೮೮ ಅಲ್ಲಿ ಅಡ್ಮಿನಿಸ್ಟ್ರೇಟರನ್ನು ಹಾಕಿದ್ದು ೧೧-೩-೧೯೮೮ಕ್ಕೆ. ೨೮-೨-೧೯೮೮ಕ್ಕೆ ಗೌರ್ನ್‌ಮೆಂಟ್ ಎಂಪ್ಲಾಯ್‌ಮೆಂಟ್ ಅಸೋಸಿಯೇಷನ್‌ನವರು ಕ್ಯಾಲೆಂಡರ್ ಆಫ್ ಈವೆಂಟ್ಸ್ ಹಾಕಿ ಚುನಾವಣೆಯನ್ನು ಮಾಡಬೇಕು ಎಂದು ನೋಟೀಸ್ ಕೊಟ್ಟು ಅಲ್ಲಿ ಚುನಾವಣೆಯಾಗುತ್ತದೆ ಎಂದು ಹೇಳುವಾಗ ಅಲ್ಲಿಯೂ ಚುನಾವಣೆಯಾಗಿ ಮೆಜಾರಿಟಿ ಪ್ರಕಾರ ಪ್ರಜಾಪ್ರಭುತ್ವದ ಪ್ರಕಾರ ಈಗ ಇರ ತಕ್ಕಂಥ ಪದಾಧಿಕಾರಿಗೆ ಅವರ ಬೆಂಬಲಿಗರೇ ಬರುತ್ತಾರೆ ಎಂದು ಹೇಳಿ ನಿಮ್ಮ ಡಿಸ್ಪಿಡೆಂಟ್ ಸ್ಪಾನ್ಸರ್ಡ್ ಗ್ರೂಪ್ ಏನು ಇದೆ, ಅದು ಮೈಕ್ರೋ ಸ್ಕೋಪಿಕ್ ಮೈನಾರಿಟಿ, ಅವರೇ ತಮ್ಮ ಮೇಲೆ ಒತ್ತಡವನ್ನು ಹಾಕಿ ಅಲ್ಲಿ ಎಲೆಕ್ಷನ್ ಮಾಡಿದರೆ ಇದರ ಆಡಳಿತ ತಮ್ಮ ಕೈತಪ್ಪಿ ಹೋಗುತ್ತದೆ ಎಂದು ಹೇಳಿ ಈ ರೀತಿ ಒತ್ತಡವನ್ನು ಮಾಡಿ ಈ ರೀತಿ ಪ್ರಲೋಭನೆಯನ್ನು ಕೊಟ್ಟು ಈ ರೀತಿ ಸೂಪರ್‌ಸೀಡ್ ಮಾಡಿದ್ದು ಉಂಟು. ಅವರು ೨೮-೨-೧೯೮೮ರಲ್ಲಿ ಚುನಾವಣೆಯನ್ನು ಮಾಡಬೇಕು ಎಂದು ಇದ್ದರು.

೧೧-೩-೧೯೮೮ಕ್ಕೆ ಅಡ್ಮಿನಿಸ್ಟ್ರೇಟರ್ ಅನ್ನು ಹಾಕಿದ್ದು, ಇವರು ಸೂಪರ್‌ಸೀಡ್ ಮಾಡಿದ್ದು ೨೮-೨-೧೯೮೮ರಂದು. ಚುನಾವಣೆ ಆಗಬೇಕು ಎಂದು ಅಸೋಸಿಯೇಷನ್‌ನವರು ಕ್ಯಾಲೆಂಡರ್ ಆಫ್ ಈವೆಂಟ್ಸ್‌ನ್ನು ಆಗಲೇ ಇಶ್ಯೂ ಮಾಡಿದರು. ಗವರ್ನಮೆಂಟ್ ಸ್ಪಾನ್ಸರ್ಡ್ ಡಿಸಿಡೆಂಟ್ ಗ್ರೂಪ್ ಇದೆ ನಿಮ್ಮ ಸೂಚನೆಯನ್ನು ಬೆಂಬಲಿಸಿ ಅವರು ಕರ್ನಾಟಕ ಹೈ ಕೋರ್ಟಿನಲ್ಲಿ ಅಡ್ಮಿನಿಸ್ಟ್ರೇಟರ್ ಮಾಡಬೇಕು ಎಂದು ರಿಟ್ ಪಿಟಿಷನ್ ಹಾಕಿದ್ದು ಹೌದೆ?, ಗೌವರ್ನಮೆಂಟ್ ದೃಷ್ಟಿಯಿಂದ ಸೂಪರ್ ಸೀಡ್ ಮಾಡಿರುವುದು ಹೌದೆ?

ಶ್ರೀ ಎಸ್ ಆರ್. ಬೊಮ್ಮಾಯಿ — ಇದನ್ನು ಸಂಪೂರ್ಣವಾಗಿ ನಿರಾಕರಣೆ ಮಾಡುತ್ತೇನೆ. ನಾವು ಅಲ್ಲಿಯ ಕೇಶವಮೂರ್ತಿಯವರ ಜೊತೆ ಮಾತುಕತೆ ಮಾಡಿದ್ದೇವೆ ಚುನಾವಣೆಗಳನ್ನು ಮಾಡಿರುವುದಕ್ಕೆ ಅನೇಕ ಕಾರಣಗಳು ಇವೆ. ಎಲ್ಲಾ ವಿಚಾರ ಹೈಕೋರ್ಟ್ ಮುಂದೆ ಇದೆ. ಇಲ್ಲಿ ಡಿಸಿಡೆಂಟ್ ಸ್ಪಾನ್ಸರ್ಡ್ ಗ್ರೂಪ್ ಎಂದು ಯಾವುದೂ ಇಲ್ಲ. ಸಮ್ಮ ಜೊತೆ ಮಾತನಾಡಿದ ಕಾಲವಲ್ಲಿನ ನಿಜವಾದ ಸಂಗತಿಗಳನ್ನು ಹೇಳಿದರೆ ನಿಮಗೆ ಎಲ್ಲಾ ಗೊತ್ತಾಗುತ್ತದೆ. ನಾನು ಅವರ ಜೊತೆ ನಡೆಸಿದ ವಿಚಾರಗಳನ್ನು ಹೇಳುವುದಿಲ್ಲ. ಚರ್ಚೆ ಮಾಡಿದ್ದಾರೆ, ಸಂಪೂರ್ಣವಾದ ಚರ್ಚೆ ಸಂಬಂಧಪಟ್ಟದ್ದು ಸರ್ಕಾರಿ ನೌಕರರ ಬಗ್ಗೆ ಮತ್ತು ಎರಡೂ ಗುಂಪುಗಳಲ್ಲಿ ಭೇದಭಾವ ಮಾಡುವುದಿಲ್ಲ, ಸರ್ಕಾರದ ಯಾವುದೇ ಗ್ರೂಪ್ ಇಲ್ಲ. ಕೇಶವಮೂರ್ತಿಯವರು ಏನು ಸೂಚನೆಗಳನ್ನು ಕೊಟ್ಟಿದ್ದಾರೆ ಅದರಲ್ಲಿ ನೂರಕ್ಕೆ ನೂರರಷ್ಟು ಒಪ್ಪಿಕೊಂಡಿದ್ದೇವೆ. ಆದರೆ ಅದಕ್ಕೂ ಈ ವಿಷಯಕ್ಕೂ ಸಂಬಂಧ ಇಲ್ಲ. ಹೈಕೋರ್ಟ್ ಮುಂದೆ ವಿಷಯ ಚರ್ಚೆ ಇದೆ, ನಿರ್ಣಯ ಆದನಂತರ ಚುನಾವಣೆಗಳನ್ನು ಮಾಡ ಬೇಕೆನ್ನುವ ವಿಚಾರ ಸರ್ಕಾರಕ್ಕೆ ಇದೆ.

ಶ್ರೀ ಎಂ. ವೀರಪ್ಪಮೊಯ್ಲಿ — ಚುನಾವಣೆಯನ್ನು ಯಾವಾಗ ಮಾಡುತ್ತೀರಿ ಮುಂದಿನ ತಿಂಗಳಿನಲ್ಲಿ ಮಾಡುತ್ತೀರಾ? ನೀವು ಪ್ರಜಾಪ್ರಭುತ್ವದ ಹಕ್ಕನ್ನು ಕಸಿದುಕೊಳ್ಳುತ್ತಿದ್ದೀರಿ. ಹಾಗೆ ಪ್ರಜಾಪ್ರಭುತ್ವದಲ್ಲಿ ನಿಮಗೆ ನಂಬಿಕೆ ಇದ್ದರೆ ನೀವು ಏಪ್ರಿಲ್ ತಿಂಗಳಿನಲ್ಲಿ ಚುನಾವಣೆಯನ್ನು ಮಾಡಿ. You are allowing them to manupulate.

ಶ್ರೀ ಎಸ್.ಆರ್. ಬೊಮ್ಮಾಯಿ.— ಮ್ಯಾನಿಪ್ಯುಲೇಷನ್ಸ್ ಮಾಡುವುದಕ್ಕೆ ಹೋಗುವುದಿಲ್ಲ, ಆದಷ್ಟು ಬೇಗ ಚುನಾವಣೆಗಳನ್ನು ಮಾಡುತ್ತೇವೆ.

ಉಪಾಧ್ಯಕ್ಷರು.— ಈಗ ಎಂ. ಶಿವಣ್ಣನವರು ೫೫ರ ನಿಯಮದ ಮೇರೆಗೆ...

ಶ್ರೀ ಎಂ. ರಾಮಪ್ಪ — ಇವತ್ತಿನ ದಿವಸ ೫೫ರ ನಿಯಮದ ಮೇರೆಗೆ ಚರ್ಚೆ ಮಾಡಿದರೆ ನಮಗೆ ಆನ್ಸರ್ ಬರುವುದಿಲ್ಲ.

ಉಪಾಧ್ಯಕ್ಷರು.— ಉತ್ತರ ಬರುತ್ತದೆ.

ಶ್ರೀ ಎಂ. ರಾಮಪ್ಪ.— ಬರುತ್ತದೆ ಅಂದರೆ ಮಂತ್ರಿಗಳು ಇಲ್ಲ, ನೀವು ಸುಮ್ಮನೆ ತೆಗೆದು ಕೊಳ್ಳುತ್ತೀರಿ. ಆನ್ಸರ್ ಕೊಡುವುದಕ್ಕೆ ಯಾರೂ ಇಲ್ಲ, ೩-೪ ದಿನ ಆಯಿತು.ನಮ್ಮ ೩೩೪ರ ವಿಷಯಗಳ ಬಗ್ಗೆ ನಮಗೆ ಏನೂ ಉತ್ತರ ಕೊಟ್ಟಿಲ್ಲ.

ಉಪಾಧ್ಯಕ್ಷರು.— ದಯವಿಟ್ಟು ತಾವು ಕುಳಿತುಕೊಳ್ಳಿ ಉತ್ತರ ಬರುತ್ತದೆ.

ಶ್ರೀ ಗೋಪಾಲ ಮಂಕಂದ ಕಾನಡೆ.— ಉತ್ತರ ಬರುವುದಿಲ್ಲ, ತರಿಸಿ ಕೊಡಿ,

ಉಪಾಧ್ಯಕ್ಷರು.— ತಾವು ಕೇಳಿದ ಪ್ರಶ್ನೆಯನ್ನು ಅಧ್ಯಕ್ಷರು ಪರಿಶೀಲನೆ ಮಾಡುತ್ತಿದ್ದಾರೆ, ನಂತರ ಹೇಳುತ್ತೇನೆ, ನೀವು ವಿಷಯವನ್ನು ಪ್ರಸ್ತಾಪ ಮಾಡಿ.

(ಗೊಂದಲ)

ಶ್ರೀ ಎಂ. ರಾಮಪ್ಪ.— ನಾವು ಉತ್ತರಕ್ಕಾಗಿ ಒತ್ತಾಯ ಮಾಡಬೇಕಾಗಿದೆ.

ಶ್ರೀ ಗೋಪಾಲ ಮಂಕಂದ ಕಾನಡೆ.— ಯಾವಾಗಲೂ ಈ ರೀತಿಯೇ ಹೇಳುತ್ತಾ ಇದ್ದಾರೆ...

(ಗೊಂದಲ)

ಶ್ರೀ ಎಂ. ರಾಮಪ್ಪ.— ಮೊನ್ನೆ ಎರಡು ಸಲ ೩೩೪ ನಿಯಮದ ಮೇರೆಗೆ ಕೇಳಿದ್ದೇನೆ ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ, ನೀವು ಸ್ವಲ್ಪ ಇವರಿಗೆ ಭೀಮಾರಿ ಹಾಕಿ ನಮಗೆ ರಕ್ಷಣೆ ಕೊಡಬೇಕು...

ಉಪಾಧ್ಯಕ್ಷರು.— ತಾವು ಈ ರೀತಿ ಗಲಾಟೆ ಮಾಡಿದರೆ ಹೇಗೆ?

ಶ್ರೀ ಗೋಪಾಲ ಮಂಕಂದ ಕಾನಡೆ.— ಗಲಾಟೆ ಮಾಡುತ್ತಾ ಇಲ್ಲ. ಉತ್ತರ ಕೊಡಿ ಎಂದು ಕೇಳುತ್ತಿದ್ದೇವೆ, ಇಲ್ಲಿ ಸಚಿವರು ಉತ್ತರ ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ರಾಮಪ್ಪನವರೇ, ಈಗ ನಿಮ್ಮ ವಿಷಯ ನನ್ನ ಗಮನಕ್ಕೆ ಬಂದಿದೆ. ೩೩೪ರ ಮೇರೆಗೆ ತುಂಗಭದ್ರಾ ಯೋಜನೆಯಿಂದ ಬೆಳೆಗೆ ನೀರು ಒದಗಿಸುವ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೀರಿ. ನಾನು ಈ ದಿನ ಸಾಯಂಕಾಲ ಅಧಿಕಾರಿಗಳನ್ನು ಕರೆಯಿಸಿ ಅವರಿಂದ ಉತ್ತರವನ್ನು ತರಿಸಿಕೊಡಿಸುತ್ತೇನೆ.

ನಿಯಮ ೩೩೪ರ ಮೇರೆಗೆ

೧) ಶ್ರೀರಂಗಪಟ್ಟಣ ಬಿದರಹಳ್ಳಿಯಲ್ಲಿ ಹರಿಜನ ಗಿರಿಜನ ಸಮುದಾಯ ಭವನವನ್ನು ನಿರ್ಮಿಸದಿರುವುದು

ಶ್ರೀ ಎಂ. ಶಿವಣ್ಣ.— ಮಾನ್ಯ ಅಧ್ಯಕ್ಷರೇ, ''ಶ್ರೀರಂಗಪಟ್ಟಣ ತಾಲ್ಲೂಕು ಬಿದರಹಳ್ಳಿಯಲ್ಲಿ ಹರಿಜನ-ಗಿರಿಜನರಿಗಾಗಿ ಸಮುದಾಯ ಭವನವೊಂದನ್ನು ನಿರ್ಮಿಸುವ ಬಗ್ಗೆ ಸುಮಾರು ೭-೮ ವರ್ಷಗಳ ಹಿಂದೆ ಸ್ಥಳೀಯರು ಪ್ರಾರಂಭಿಸಿದ್ದುದನ್ನು ಮುಂದುವರಿಸಿ, ಪೂರ್ಣಗೊಳಿಸಲು ಅಂದಿನ ಮಂತ್ರಿಗಳು ಒಪ್ಪಿದ್ದರು, ಕೆಲಸವಾಗದ ಬಗ್ಗೆ ಈಗ್ಗೆ ಎರಡು ವರ್ಷಗಳಿಂದಲೂ ಪ್ರಯತ್ನಿಸಲಾಗಿದೆ. ಕಳೆದ ವರ್ಷ ಇದೇ ಸಭೆಯಲ್ಲಿ ಮಾನ್ಯ ಮಂತ್ರಿಗಳು ಸದರಿ ಸಮುದಾಯ ಭವನವನ್ನು ಮಾಡಿಸಿ ಕೊಡುವುದಾಗಿ ಆಶ್ವಾಸನೆ ಕೊಟ್ಟಿದ್ದು, ಇನ್ನೂ ಆ ಕಾರ್ಯ ಆಗಿರುವುದಿಲ್ಲ. ಆದ್ದರಿಂದ ಕೂಡಲೆ ಈ ಕಾರ್ಯವನ್ನು ಮಾಡಿಸಿಕೊಟ್ಟು ಸ್ಥಳೀಯ ಹರಿಜನ-ಗಿರಿಜನರಿಗೆ ಅನುಕೂಲವಾಗುವಂತೆ ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಮಂತ್ರಿಗಳಿಗೆ ಹೇಳಿ ಅವರಿಗೆ ಉತ್ತರವನ್ನು ಒದಗಿಸಿಕೊಡುತ್ತೇನೆ.

(ಗೊಂದಲ)

ಶ್ರೀ ಜಿ. ಎಂ. ಕಾನಡೆ.— ಮಾನ್ಯ ಸಚಿವರು ಯಾವಾಗಲೂ ಇದೇ ರೀತಿ ಹೇಳುತ್ತಾರೆ. ಆದರೆ ನಮಗೆ ಉತ್ತರವನ್ನು ಕಳುಹಿಸಿಕೊಡುವುದಿಲ್ಲ.